# ‘ರೈತರು ನೀಡಿದ ತೀರ್ಪಿಗೆ ಆದ್ಯತೆಯಿರಲಿ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕೃಷಿ ಅಭಿವೃದ್ಧಿಗೆ ವಿಜ್ಞಾನ-ತಂತ್ರಜ್ಞಾನ ಬೇಕೆ-ಬೇಡವೇ? ಪಾರಂಪರಿಕ ವಿದ್ಯೆ ಈಗಲೂ ಪ್ರಸ್ತುತವೇ? ಕೃಷಿ ಪದ್ಧತಿ ಬಗ್ಗೆ ಹೆಚ್ಚು ಯಾರಿಗೆ ಗೊತ್ತು-ರೈತರಿಗಾ ಅಥವಾ ವಿಜ್ಞಾನಿಗಳಿಗಾ? ಕೃಷಿಗೆ ಇಂದಿನ ಅಗತ್ಯತೆ ಏನು?....

ಹೀಗೆ ಹತ್ತು ಹಲವು ಪ್ರಶ್ನೆಗಳು ಕೇಳಿ ಬಂದದ್ದು ಮತ್ತು ಉತ್ತರಗಳನ್ನು ಕಂಡುಕೊಳ್ಳುವ ಪ್ರಯತ್ನ ನಡೆದಿದ್ದು ಕೃಷಿ ತಂತ್ರಜ್ಞರ ಸಂಸ್ಥೆಯ ಸಭಾಂಗಣದಲ್ಲಿ ಶನಿವಾರ ಏರ್ಪಡಿಸಲಾಗಿದ್ದ ‘ರೈತ ತೀರ್ಪು’ ಮಂಡನೆ ಕಾರ್ಯಕ್ರಮದಲ್ಲಿ.

ಒಂದೆಡೆ ರೈತರು, ಮತ್ತೊಂದೆಡೆ ಕೃಷಿ ವಿಜ್ಞಾನಿಗಳು. ವಾದ-ಪ್ರತಿವಾದ-ಸಂವಾದ ಎಲ್ಲವೂ ನಡೆದವು. ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಅಭಿಪ್ರಾಯ ಮಂಡಿಸಿದರು. ಕೃಷಿ ಅಭಿವೃದ್ಧಿಗೆ ವರ್ಷಗಳಿಂದ ಪಾಲಿಸಿಕೊಂಡು ಬರಲಾಗುತ್ತಿರುವ ಪಾರಂಪರಿಕ ವಿದ್ಯೆಯೇ ಸರಿ ಎಂದು ಒಬ್ಬರು ಸಮರ್ಥಿಸಿಕೊಂಡರೆ, ಕೃಷಿಗೆ ವಿಜ್ಞಾನ-ತಂತ್ರಜ್ಞಾನ ಪೂರಕ ಎಂದು ಮತ್ತೊಬ್ಬರು ಒತ್ತು ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಎಂ.ಎನ್.ವೆಂಕಟಾಚಲಯ್ಯ ಮಾತನಾಡಿ, ‘ಕೃಷಿ ಸಮಸ್ಯೆ ಮತ್ತು ಪರಿಹಾರದ ಬಗ್ಗೆ ಆಳವಾಗಿ ಅರಿತಿರುವ ರೈತರು ಉತ್ತಮ ತೀರ್ಪು ಮಂಡಿಸಿದ್ದಾರೆ. ಕೃಷಿಯು ಎದುರಿಸುತ್ತಿರುವ ಸಮಸ್ಯೆ ಮತ್ತು ಆಗಬೇಕಿರುವ ಪರಿಹಾರದ ಬಗ್ಗೆ ಬೆಳಕು ಚೆಲ್ಲಿದ್ದಾರೆ’ ಎಂದರು.

‘ದೇಶ ಸ್ವಾತಂತ್ರ್ಯ ಗಳಿಸುವ ಮುನ್ನ ಮತ್ತು ನಂತರದ ದಿನಗಳಲ್ಲಿ ಭಾರಿ ಬದಲಾವಣೆಗಳು ಆಗಿವೆ. ಜನಸಂಖ್ಯೆ ಸ್ಫೋಟಗೊಳ್ಳುವುದರ ಜೊತೆಗೆ ಆಹಾರಕ್ಕಾಗಿ ಬೇಡಿಕೆ ಸಹ ಹೆಚ್ಚುತ್ತಿದೆ. ದಿನದಿಂದ ದಿನಕ್ಕೆ ಪರಿಸ್ಥಿತಿ ಗಂಭೀರಗೊಳ್ಳುತ್ತಿದೆ’ ಎಂದು ಆತಂಕ ವ್ಯಕ್ತಪಡಿಸಿದರು.

‘ರಾಸಾಯನಿಕ ಪದಾರ್ಥಗಳ ಬಳಕೆ ಮತ್ತು ಇನ್ನಿತರ ಕಾರಣಗಳಿಂದ ಭೂಮಿ ಬರಡಾಗುತ್ತಿದೆ. ಫಲವತ್ತತೆ ಕಳೆದುಕೊಳ್ಳುತ್ತಿದೆ. ಕೃಷಿ ಸಮಸ್ಯೆಗಳನ್ನು ಪರಿಹರಿಸುವ ಬಗ್ಗೆ ಆಳವಾದ ಚಿಂತನೆ ನಡೆಸಬೇಕಿದೆ’ ಎಂದು ಅವರು ಸಲಹೆ ನೀಡಿದರು.

ಕೃಷಿ ತಂತ್ರಜ್ಞರ ಸಂಸ್ಥೆಯ ಉಪಾಧ್ಯಕ್ಷ ಡಾ. ವೀರಭದ್ರಯ್ಯ ಮಾತನಾಡಿ, ‘ಕೃಷಿ ಕ್ಷೇತ್ರದಲ್ಲಿ ಆಗುವ ಬಹುತೇಕ ಸಂಶೋಧನೆಗಳು ರೈತಪರ ಇರುತ್ತವೆ. ರೈತರಿಗೆ ನೆರವಾಗಲು ವಿಜ್ಞಾನಿಗಳು-ತಂತ್ರಜ್ಞರು ಶ್ರಮಿಸುತ್ತಿದ್ದಾರೆ’ ಎಂದರು.

‘ರೈತರು ನೀಡಿದ ತೀರ್ಪಿಗೆ ಆದ್ಯತೆ ನೀಡಬೇಕಿದೆ. ಇದರಲ್ಲಿನ ಅಂಶಗಳನ್ನು ಪ್ರಮುಖವಾಗಿ ಪರಿಗಣಿಸಿ, ಸಮಸ್ಯೆಗಳನ್ನು ನಿವಾರಿಸಲು ಸೂಕ್ತ ಕ್ರಮ ತೆಗೆದುಕೊಳ್ಳಬೇಕಿದೆ’ ಎಂದರು.

ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್, ರೈತ ಮುಖಂಡರಾದ ಕುರುಬೂರು ಶಾಂತಕುಮಾರ್, ಸುನಂದಾ ಜಯರಾಮು, ವಕೀಲರಾದ ಹೇಮಲತಾ ಮಹಿಷಿ, ಡಾ. ಗೋಪಾಲ ಕಾಡೆಕುಡಿ, ಆದರ್ಶ ಸಂಸ್ಥೆಯ ಸಂಯೋಜಕ ಪಿ.ವಿ.ಸತೀಶ್ ಮತ್ತಿತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.



ಬೆಂಗಳೂರಿನ ಕೃಷಿ ತಂತ್ರಜ್ಞರ ಸಂಸ್ಥೆಯ ಸಭಾಂಗಣದಲ್ಲಿ ಶನಿವಾರ ನಡೆದ ‘ರೈತ ತೀರ್ಪು’ ಮಂಡನೆ ಕಾರ್ಯಕ್ರಮದಲ್ಲಿ ರೈತ ಮುಖಂಡರಾದ ಕುರುಬೂರು ಶಾಂತಕುಮಾರ್, ಕೋಡಿಹಳ್ಳಿ ಚಂದ್ರಶೇಖರ್, ಮಾಜಿ ಸಚಿವೆ ಬಿ.ಟಿ.ಲಲಿತಾ ನಾಯಕ್, ವಕೀಲರಾದ ಹೇಮಲತಾ ಮಹಿಷಿ ಮತ್ತಿತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ನಗರದ ‘ಫೈರ್‌ಫ್ಲೈಸ್’ ಎಂಬ ಆಶ್ರಮದಲ್ಲಿ ಡಿಸೆಂಬರ್ 1 ರಿಂದ 3ರವರೆಗೆ ನ್ಯಾಯಮಂಡಳಿಯ ಸದಸ್ಯರಾಗಿ ಸಭೆ ನಡೆಸಿದ ಮತ್ತು ಕೃಷಿ ಪರಿಣಿತರೊಂದಿಗೆ ಸಂವಾದ ಮಾಡಿದ 30 ಮಂದಿ ಸಣ್ಣ ರೈತರು, ಮಹಿಳೆಯರು ಮತ್ತು ಕಾರ್ಮಿಕರು 22 ಅಂಶಗಳನ್ನು ಒಳಗೊಂಡ ತೀರ್ಪು ನೀಡಿದ್ದಾರೆ.

ಗುಲ್ಬರ್ಗ, ಚಿತ್ರದುರ್ಗ, ಮಂಡ್ಯ ಸೇರಿದಂತೆ ವಿವಿಧ ಜಿಲ್ಲೆಗಳ ರೈತರು ತೀರ್ಪಿನ ಮೂಲಕ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದು, ತಾವು ಬಯಸಿರುವ ಅಂಶಗಳು ಜಾರಿಯಾಗಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಪುರುಷರು ಮಾತ್ರವಲ್ಲದೇ ಮಹಿಳೆಯರು ಸಹ ತೀರ್ಪಿಗೆ ಸಂಬಂಧಿತ ಸಂವಾದದಲ್ಲಿ ಪಾಲ್ಗೊಂಡಿದ್ದು ವಿಶೇಷವಾಗಿತ್ತು. ಗ್ರಾಮಗಳಲ್ಲಿ ಕೆಲ ಸಂದರ್ಭಗಳಲ್ಲಿ ಮಾತನಾಡಲು ಹಿಂಜರಿಯುವ ಅವರು ಕೃಷಿ ಸಮಸ್ಯೆಗಳ ಬಗ್ಗೆ ಮುಕ್ತವಾದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

## ರೈತರ ತೀರ್ಪು

- ವಿಜ್ಞಾನಿಗಳು ರೈತಪರ ಸಂಶೋಧನೆ ಕೈಗೊಳ್ಳಬೇಕು
- ರೈತರ ಅನುಶೋಧನೆಗಳಿಗೂ ಆದ್ಯತೆ ನೀಡಬೇಕು
- ಹವಾಮಾನ ಬದಲಾವಣೆ ಕುರಿತು ಸಮಗ್ರ ಮಾಹಿತಿ
- ಸಂಚಾರಿ ಮಣ್ಣು ಪರೀಕ್ಷಾ ಕೇಂದ್ರಗಳನ್ನು ಆರಂಭಿಸಬೇಕು
- ರೈತ ವಿರೋಧಿ ಬೀಜ ಕಾನೂನುಗಳನ್ನು ರೂಪಿಸಬಾರದು
- ಕೃಷಿ ಕ್ಷೇತ್ರಕ್ಕೆ ಸರ್ಕಾರಗಳು ಪ್ರತ್ಯೇಕ ಬಜೆಟ್ ಮಂಡಿಸಬೇಕು
- ಅಭಿವೃದ್ಧಿ ಹೆಸರಿನಲ್ಲಿ ರೈತರಿಂದ ಕೃಷಿಭೂಮಿ ಕಿತ್ತುಕೊಳ್ಳಬಾರದು
- ಗ್ರಾಮ ಪಂಚಾಯತ್‌ಮಟ್ಟದಲ್ಲಿ ಬೀಜ ಬ್ಯಾಂಕುಗಳ ಸ್ಥಾಪನೆ